# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಹಂಚಿಕೆಯಾಗಿರುವ ರೂ.3.00 ಕೋಟಿ ಅನುದಾನವನ್ನು ಜೀತ ಕಾರ್ಮಿಕರ ಪುನರ್ ವಸತಿಗಾಗಿ (ಕಾರ್ಪಸ್ ನಿಧಿ)ಯನ್ನು ಸ್ಥಾಪಿಸಿ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ: 1.ಸಮ ಸಂಖ್ಯೆಯ ಸರ್ಕಾರದ ಆದೇಶ ಸಂಖ್ಯೆ: ಕಾಇ 122 ಸಿಎಲ್‌ಸಿ ದಿನಾಂಕ: 22.11.29182.

2.ನಿರ್ದೇಶಕರು, ಗ್ರಾಮೀಣ ಮೂಲ ಸೌಕರ್ಯ-2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ ಗ್ರಾಅಪ:50 ಆರ್‌ಬಿಎಲ್ ದಿನಾಂಕ:.11.12.2018

* * * * *

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆದೇಶದಲ್ಲಿ 2018-19ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾಗಿರುವ ರೂ.03.00 ಕೋಟಿ ಅನುದಾನವನ್ನು ಜೀತಕಾರ್ಮಿಕರ ವಿಮುಕ್ತರಿಗೆ ಪುನರ್ ವಸತಿಗೆ ಮಾತ್ರ ಬಳಸಿಕೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಹಂತದಲ್ಲಿ ಕಾರ್ಪಸ್ ನಿಧಿ ಸ್ಥಾಪನೆ ಮಾಡಲು ತಲಾ ರೂ.10.00 ಲಕ್ಷಗಳಂತೆ ಒಟ್ಟು ರೂ.03.00 ಕೋಟಿಗಳ ಅನುದಾನವನ್ನು ಜೀತದಾಳುಗಳ ಪುರ್ವಸತಿ ಯೋಜನೆಯಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನಿರ್ದೇಶಕರು (ಗ್ರಾಮೂಸೌ-2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ನಿಯಂತ್ರಣಾಧಿಕಾರಿಯನ್ನಾಗಿ ನೇಮಕ ಮಾಡಿ, ಸರ್ಕಾರದ ಆದೇಶ ಸಂಖ್ಯೆ:ಕಾಇ 122 ಸಿಎಲ್‌ಸಿ 2018 ದಿನಾಂಕ:11.12.2018ರಲ್ಲಿ ಕೆಲವು ಷರತ್ತಿಗೊಳಪಟ್ಟು ಬಿಡುಗಡೆ ಮಾಡಲಾಗಿತ್ತು.

ನಿರ್ದೇಶಕರು (ಗ್ರಾಮೂಸೌ-2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಮೇಲೆ ಓದಲಾದ (2)ರಲ್ಲಿ ಅನದಿಕೃತ ಟಿಪ್ಪಣಿ ಸಂಖ್ಯೆ; ಗ್ರಾಅಪ 50 ಆರ್‌ವಿಎಲ್ 2016 ದಿನಾಂಕ: 11.12.2018ರಲ್ಲಿ ಸದರಿ ಆದೇಶವನ್ನು ಉಲ್ಲೇಖಿಸುತ್ತಾ, ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಖಜಾನೆ-2 ಕಾರ್ಯಾಲಯವನ್ನು ಸಂಪರ್ಕಿಸಿದಾಗ, ಲೆಕ್ಕಶೀರ್ಷಿಕೆ: 2230-01-112-0-01 CCO,CO ಕಾರ್ಮಿಕ ಇಲಾಖೆಯಾಗಿರುವುದರಿಂದ, ಈ ಅನುದಾನವನ್ನು ಕಾರ್ಮಿಕ ಇಲಾಖೆಯು ಮಾತ್ರ ಕೆ-2ನಲ್ಲಿ ಬಿಡುಗಡೆ ಮಾಡಲು ಸಾಧ್ಯವೆಂದು ತಿಳಿಸುತ್ತಾ, ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಾರ್ಪಸ್ ನಿಧಿಯನ್ನು ಈ ಉದ್ದೇಶಕ್ಕಾಗಿ, ಕಾರ್ಪಸ್ ನಿಧಿ ಸ್ಥಾಪಿಸಿ ಬಳಸಿಕೊಳ್ಳಲು ತಲಾ ರೂ.10.00ಲಕ್ಷದಂತೆ ರೂ.03.00ಕೋಟಿಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ

## ಸರ್ಕಾರದ ಆದೇಶ ಸಂಖ್ಯೆ: ಕಾಇ 122 ಸಿಎಲ್‌ಸಿ 2018,
## ಬೆಂಗಳೂರು, ದಿನಾಂಕ: 21.12.2018

2018-19ನೇ ಸಾಲಿನ ಜೀತಕಾರ್ಮಿಕರಿಗೆ ಜೀತ ಕಾರ್ಮಿಕತೆಯಿಂದ ವಿಮುಕ್ತಿ ಹೊಂದಿರುವ ಕಾರ್ಮಿಕರ ತಕ್ಷಣದ ನೆರವಿಗಾಗಿ ಪ್ರತಿ ಜಿಲ್ಲೆಗೆ ಕಾರ್ಪಸ್ ನಿಧಿಯನ್ನು ಸ್ಥಾಪಿಸಿ ಬಳಸಿಕೊಳ್ಳಲು ತಲಾ ರೂ.10.00ಲಕ್ಷದಂತೆ 30 ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಲು ಕಾರ್ಮಿಕ ಆಯುಕ್ತರಿಗೆ ರೂ.3.00 ಕೋಟಿಯನ್ನು ಸರ್ಕಾರವು ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು 2018-19ನೇ ಸಾಲಿನಲ್ಲಿ [ಖಜಾನೆ-2]ನಲ್ಲಿ ಲೆಕ್ಕಶೀರ್ಷಿಕೆ: 2230-01-112-0-01-059 ರಡಿಯಲ್ಲಿ ಮಾತ್ರ ಭರಿತಕ್ಕದ್ದು.

ಮೇಲೆ ಓದಲಾದ (1)ರ ಆದೇಶದಲ್ಲಿ ನಮೂದಿಸಲಾಗಿದ್ದ ಷರತ್ತುಗಳನ್ನು ಪಾಲಿಸತಕ್ಕದ್ದು, ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಅವರ ಹಿಂಬರಹ ಸಂಖ್ಯೆ ಆಇ 687 ವೆಚ್ಚ-9 ದಿನಾಂಕ: 31.10.2018ರಲ್ಲಿ ಪಡೆದು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಗ್ರಾಅಪ:50 ಆರ್‌ಬಿಎಲ್ ದಿನಾಂಕ:.11.12.2018 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಕೆ.ಧರ್ಮರಾಜಪ್ಪ)
ಸರ್ಕಾರದ ಉಪಕಾರ್ಯದರ್ಶಿ-2
ಕಾರ್ಮಿಕ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನ, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, 3ನೇ ಮಹಡಿ, ಬೆಂಗಳೂರು-1
3. ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
4. ಎಲ್ಲಾ ಜಿಲ್ಲಾಧಿಕಾರಿಗಳು,
5. ನಿರ್ದೇಶಕರು ಯೋಜನಾ ವಿಭಾಗ, ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ನಿರ್ದೇಶಕರು ಗ್ರಾ.ಅ.ಪ ಇಲಾಖೆ, [ಗಣಕ ಕೋಶ-ಇಲಾಖಾ ತಂತ್ರಾಂಶದಲ್ಲಿ ಪ್ರಕಟಿಸಲು ಕೋರಿ] ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.
7. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು,
8. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಸ್ಟೇಟ್ ಚೈಲ್ಡ್ ಲೇಬರ್ ಎರಾಡಿಕೇಷನ್ ಪ್ರಾಜೆಕ್ಟ್ ಸೊಸೈಟಿ, ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
9. ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರಿಗೆ.
11. ಸರ್ಕಾರದ ಉಪ ಕಾರ್ಯದರ್ಶಿ-2 ರವರ ಶಾಖೆ, ಕಾರ್ಮಿಕ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3)/(ವೆಚ್ಚ-9).
14. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
15. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ